
ಎಂ.ಎಸ್. ಆಶಾದೇವಿ

# ರಾಮಾಯಣದ ಗಂಡಿನ ಓದನ್ನು ಗಂಡೇ ಮುರಿವ ಮಹತ್ವದ ಪ್ರಯತ್ನ

ಎಲ್ಲ ಪರಂಪರೆಗಳಲ್ಲೂ ಕೆಲವು ನಿತ್ಯನೂತನ ಪಾತ್ರಗಳಿರುತ್ತವೆ. ಅವು ಜನಮಾನಸದಲ್ಲಿ, ಪಂಡಿತ–ಪಾಮರರಲ್ಲಿ, ಗಂಡು ಹೆಣ್ಣುಗಳಲ್ಲಿ, ಸಾಂಪ್ರದಾಯಿಕರು–ಆಧುನಿಕರಲ್ಲಿ, ವಿದ್ಯಾವಂತ–ಅವಿದ್ಯಾವಂತರಲ್ಲಿ ಒಂದಕ್ಕೊಂದು ಹೊಂದಲಾರದ ಅಸಮಾನ, ವ್ಯಕ್ತ, ಅವ್ಯಕ್ತ ಪಾತಳಿಗಳಲ್ಲಿ ಸ್ವರೂಪಗಳಲ್ಲಿ ಜೀವಂತವಾಗಿರುತ್ತವೆ. ಈ ದೃಷ್ಟಿಯಿಂದ ಅವು ಅಕ್ಷಯ ಪಾತ್ರಗಳು. ಈ ಪಾತ್ರಗಳು ಬದಲಾದ ದೃಷ್ಟಿಕೋನಗಳಿಗೂ, ಸಂದರ್ಭಗಳಿಗೂ ತಾಕುವ ಪರಿಯೂ ಅಷ್ಟೇ ಅಪೂರ್ವವಾಗಿರುತ್ತದೆ. ಸೀತೆ ಭಾರತೀಯ ಜನಮಾನಸವನ್ನು ಹಾಸಾಗಿ ಹೊಕ್ಕಿರುವ ಪರಿಯೂ ಇಂಥದ್ದೇ. ರಾಮಾಯಣದ ಜೊತೆಯಲ್ಲೇ ನೆರಳಿನಂತೆ ಸೀತೆಯೂ ಶೀರ್ಷಿಕೆಯಲ್ಲೂ ಕಂಡೂ ಕಾಣದಂತೆ ಧ್ವನಿಸುತ್ತಾಳೆ. ಎಷ್ಟೇ ಆಗಲಿ ಛಾಯಾ ಪತ್ನಿ ಎನ್ನುವ ಬಿರುದಾಂಕಿತಳು ತಾನೇ! ಹೆಣ್ಣಿನ ನೇಪಥ್ಯದ ಬದುಕಿಗೊಂದು ಭಾಷ್ಯದಂತೆಯೇ ಸೀತೆಯ ಮಾದರಿಯನ್ನು ಗಟ್ಟಿಯಾಗಿ ಬೇರೂರಿಸಲಾಗಿದೆ. ಭಾರತವೆನ್ನುವ ಧರಣಿ ಮಂಡಲದ ಉದ್ದಗಲಕ್ಕೂ ಸೀತೆಯನ್ನು ಕುರಿತ ಸಾವಿರಾರು ಅದ್ಭುತ ಕಥನಗಳಿವೆ. ಸೀತೆಯನ್ನು ತಾಯಿಬೇರಾಗಿಸಿ ಒಡೆದಿರುವ ಟಿಸಿಲುಗಳ




**ಸೀತಾ**
ಇಂಗ್ಲಿಷ್ ಮೂಲ: ದೇವದತ್ ಪಟ್ಟನಾಯಕ್
ಕನ್ನಡಕ್ಕೆ: ಪದ್ಮರಾಜ ದಂಡಾವತಿ
ಪು: 374 ಬೆ: ₹ 700
ಪ್ರ: ಮನೋಹರ ಗ್ರಂಥಮಾಲೆ, ಧಾರವಾಡ

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.